| 1 | 2 | 3 | 4 |
|---|---|---|---|
| 15 | Meenkhera Village, Humnabad Taluk | Construction of compound wall to Khabrastan | 50,000/- |
| 16 | Jamia Masjid (Sunni) Marakal Grama, Humnabad Taluk | Construction of Masjid | 50,000/- |
| 17 | Thakia & Chilla Mehaboob Subhani Dargah, Marakal, Humnabad Taluk | Construction of Masjid | 50,000/- |
| **BHALKI TALUK** | | | |
| 1 | Masjid-e-Hussaini, Bhalki | Construction of compound to Khabrastan & Mosque | 1,00,000/- |
| | | Total | 20,50,000/- |

1193 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) (ಎಂಎಲ್ಎ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಎರಡು ಆಯವ್ಯಯದ ಅವಧಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಪ್ರಕಟಿಸಲಾದ ಹೊಸ ಯೋಜನೆಗಳ ವಿವರಗಳೇನು;

ಆ) ಈ ಪೈಕಿ ಎಷ್ಟು ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಎಷ್ಟೆಷ್ಟು ಅನುದಾನ ರಾಜ್ಯಕ್ಕೆ ಬಂದಿದೆ;

ಇ) ಕಳೆದ ಎರಡು ಆಯವ್ಯಯದ ಅವಧಿಯಲ್ಲಿ ಈ ಯೋಜನೆಗಳ ಅನುಷ್ಠಾನಕ್ಕಾಗಿ ಬೀದರ್ ಜಿಲ್ಲೆಗೆ ಒದಗಿಸಲಾದ ಹಣವೆಷ್ಟು; ಈ ಹಣದಿಂದ

ಜಿಲ್ಲೆಯಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳ ವಿವರಗಳೇನು (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

ಈ) ಇಲಾಖೆ ಜಾರಿಗೆ ತಂದಿರುವ ಹೊಸ ಯೋಜನೆಗಳನ್ನು ಬೀದರ್ ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಪೂರ್ಣ ವಿವರಗಳನ್ನು ಒದಗಿಸುವುದು)?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಕಳೆದ ಎರಡು ವರ್ಷಗಳ ಅವಧಿಯಲ್ಲಿ ಇಲಾಖೆ ಪ್ರಕಟಿಸಿದ ಹೊಸ ಯೋಜನೆಗಳ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ಎನ್.ಆರ್.ಹೆಚ್.ಎಂ. ಯೋಜನೆಯಡಿಯಲ್ಲಿ ಕಳೆದ ಎರಡು ಆಯವ್ಯಯದ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾದ ಅನುದಾನ ಕೆಳಕಂಡಂತಿದೆ:

| ಆರ್ಥಿಕ ವರ್ಷ | ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ (ರೂ. ಕೋಟಿಗಳಲ್ಲಿ) |
|---|---|
| 2007–08 | 159.06 |
| 2008–09 | 322.80 |

ಇ) ಅನುಬಂಧ 2 ಮತ್ತು 3ರಲ್ಲಿ ಒದಗಿಸಿದೆ.

**2008–09ರ ಆಶಾ ಕಾರ್ಯಕರ್ತೆಯರ ವಿವರ**

| ಕ್ರ ಸಂ. | ವಿಧಾನ ಸಭಾ ಕ್ಷೇತ್ರ | ಆಶಾ ಆಯ್ಕೆ ಮತ್ತು ತರಬೇತಿ ಹೊಂದಿ ದವರ ವಿವರ | ಬಿಡುಗಡೆಯಾ ದ ಅನುದಾನ | ಖರ್ಚಾದ ಅನುದಾನ ಜೂನ್–09ರ ವರೆಗೆ |
|---|---|---|---|---|
| 1 | 2 | 3 | 4 | 5 |
| 1 | ಬೀದರ್ ಉತ್ತರ | 238 | ರೂ. 11,60,000 | ರೂ. 4,82,590 |

| 1 | 2 | 3 | 4 | 5 |
|---|---|---|---|---|
| 2 | ಬೀದರ್ ದಕ್ಷಿಣ | 73 | ರೂ. 3,65,000 | ರೂ. 2,08,265 |
| 3 | ಭಾಲ್ಕಿ | 226 | ರೂ. 11,10,000 | ರೂ. 8,68,850 |
| 4 | ಬಸವ ಕಲ್ಯಾಣ | 206 | ರೂ. 10,70,000 | ರೂ. 5,58,405 |
| 5 | ಔರಾದ | 222 | ರೂ. 11,85,000 | ರೂ. 9,21,880 |
| 6 | ಹುಮನಾ ಬಾದ | 155 | ರೂ. 7,85,000 | ರೂ. 5,63,985 |
| | **ಒಟ್ಟು** | **1120** | **ರೂ. 56,75,000** | **ರೂ. 36,03,975** |

| ಕ್ರ ಸಂ. | ವಿಧಾನ ಸಭಾ ಕ್ಷೇತ್ರ | ಪ್ರಸೂತಿ ಆರೈಕೆ ಯೋಜನೆಯಲ್ಲಿ ಬಿಡುಗಡೆ ಮಾಡಲಾಗಿರುವ ಮೊತ್ತ | |
|---|---|---|---|
| | | **2007–08** | **2008–09** |
| **1** | **2** | **3** | **4** |
| 1 | ಬೀದರ್ ಉತ್ತರ | ರೂ. 2,59,000 | ರೂ. 2,00,000 |
| 2 | ಬೀದರ್ ದಕ್ಷಿಣ | ರೂ. 0 | ರೂ. 7,00,000 |
| 3 | ಭಾಲ್ಕಿ | ರೂ. 4,77,000 | ರೂ. 7,00,000 |
| 4 | ಬಸವಕಲ್ಯಾಣ | ರೂ. 2,44,500 | ರೂ. 7,00,000 |
| 5 | ಔರಾದ | ರೂ. 5,68,000 | ರೂ. 5,40,000 |
| 6 | ಹುಮ್ನಾಬಾದ್ | ರೂ. 2,61,500 | ರೂ. 5,00,000 |
| | **ಒಟ್ಟು** | **ರೂ. 18,10,000** | **ರೂ. 34,40,000** |

| ಕ್ರ ಸಂ. | ವಿಧಾನ ಸಭಾ ಕ್ಷೇತ್ರ | ತಾಯಿ ಭಾಗ್ಯ ಯೋಜನೆ 2007–08 | ತಾಯಿ ಭಾಗ್ಯ ಯೋಜನೆ 2008–09 |
|---|---|---|---|
| | | ಅನುದಾನ ಬಿಡುಗಡೆ ಆಗಿರುವುದಿಲ್ಲ | ಬಿಡುಗಡೆಯಾದ ಅನುದಾನ |
| 1 | 2 | 3 | 4 |
| 1 | ಬೀದರ್ ಉತ್ತರ | – | ರೂ. 1,35,000 |
| 2 | ಬೀದರ್ ದಕ್ಷಿಣ | – | ರೂ. 0 |
| 3 | ಭಾಲ್ಕಿ | – | ರೂ. 45,000 |
| 4 | ಬಸವ ಕಲ್ಯಾಣ | – | ರೂ. 45,000 |
| 5 | ಔರಾದ | – | ರೂ. 0 |
| 6 | ಹುಮನಾ ಬಾದ | – | ರೂ. 15000 |
| | ಒಟ್ಟು | – | ರೂ. 240000 |

- ಜೂನ್ 2009ರ ಅಂತ್ಯದವರೆಗೂ 11245 ಮಡಿಲು ಕಿಟ್‌ಗಳನ್ನು ರಾಜ್ಯದಿಂದ ಸರಬರಾಜು ಮಾಡಲಾಗಿದೆ. ಅದರಲ್ಲಿ 8288 ಕಿಟ್‌ಗಳನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ.
- 2008–09ನೇ ಸಾಲಿನಲ್ಲಿ ಆರ್.ಸಿ.ಹೆಚ್. ಯೋಜನೆಯಡಿಯಲ್ಲಿ ಒಂದು ನಗರ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಿದ್ದು, ಆರೋಗ್ಯ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ.
- 4 ಜನ ಆಯುಷ್ ವೈದ್ಯರನ್ನು ಬೀದರ್ ತಾಲ್ಲೂಕಿನಲ್ಲಿ ನೇಮಕಾತಿ ಮಾಡಿಕೊಳ್ಳಲು ಆದೇಶ ನೀಡಲಾಗಿದೆ.
- ಜನನಿ ಸುರಕ್ಷಾ ವಾಹಿನಿ ಯೋಜನೆಯಡಿಯಲ್ಲಿ ಒಟ್ಟು 5 ಎಫ್.ಆರ್.ಯು. ಗಳಿಗೆ 10 ಜನ ಅಂಬ್ಯುಲೆನ್ಸ್ ವಾಹನ ಚಾಲಕರನ್ನು

ತಲಾ ಇಬ್ಬರಂತೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.

- 2008–09ನೇ ಸಾಲಿನಲ್ಲಿ ಕೆ.ಪಿಚ್.ಎಸ್.ಡಿ.ಆರ್.ಪಿ. ಯೋಜನೆಯಡಿಯಲ್ಲಿ ಭಾಲ್ಕಿ ತಾಲ್ಲೂಕಿಗೆ ಒಂದು ಸಂಚಾರಿ ಆರೋಗ್ಯ ಘಟಕದ ಮಂಜೂರಾತಿ.
- 2008–09ನೇ ಸಾಲಿನಲ್ಲಿ ಬೀದರ್ ಜಿಲ್ಲಾ ಆಸ್ಪತ್ರೆಯಲ್ಲಿ ಒಂದು ನಾಗರೀಕ ಸಹಾಯ ವೇದಿಕೆಯ ಸ್ಥಾಪನೆ.

ಈ) – ಪ್ರತಿಯೊಂದು ಕಾರ್ಯಕ್ರಮಗಳ ಮಾರ್ಗಸೂಚಿಗಳನ್ನು ಜಿಲ್ಲೆಗಳಿಗೆ ರವಾನಿಸಲಾಗಿದೆ.

– ಪ್ರತಿ ಜಿಲ್ಲೆಗೆ ನೋಡಲ್ ಅಧಿಕಾರಿಗಳನ್ನು ಗುರುತಿಸಿ, ಕಾರ್ಯಕ್ರಮಗಳ ಮೇಲ್ವಿಚಾರಣೆಯನ್ನು ವಹಿಸಲಾಗಿದೆ.

– ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಪ್ರತಿ ತಿಂಗಳು ನಡೆಸಲಾಗುತ್ತಿದೆ.

– ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಯೋಜನಾ ನಿರ್ವಹಣಾ ಘಟಕಗಳನ್ನು ಸ್ಥಾಪಿಸಲಾಗಿದೆ.

1) ರಾಜ್ಯದಿಂದ ಬೀದರ್ ಜಿಲ್ಲೆಗೆ ನಿರ್ದೇಶನಾಲಯದಿಂದ ಓರ್ವ ಹಿರಿಯ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿದ್ದು ಅವರು ಎಲ್ಲಾ ಕಾರ್ಯಕ್ರಮಗಳ ಮೇಲುಸ್ತುವಾರಿ ಮಾಡಿ ಮಾರ್ಗದರ್ಶನ ನೀಡುವುದಲ್ಲದೇ ಪ್ರಗತಿ ಪರಿಶೀಲನಾ ಕೂಡಾ ಮಾಡುತ್ತಿದ್ದಾರೆ.

2) ಜಿಲ್ಲಾ ಆರೋಗ್ಯ ಸೊಸೈಟಿಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಎಲ್ಲಾ ಕಾರ್ಯಕ್ರಮಗಳ ಪ್ರಗತಿ ವಿಮರ್ಶೆ ಮಾಡುತ್ತಾರೆ. ಜಿಲ್ಲಾ ಆರೋಗ್ಯ ಮಿಷನ್ ಅಡಿ ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷರು ಆಗಿದ್ದು, ಜಿಲ್ಲಾಧಿಕಾರಿಗಳು, ಉಪಾಧ್ಯಕ್ಷರು ಹಾಗೂ ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಆರೋಗ್ಯ ಮಿಷನ್ ಉಪಾಧ್ಯಕ್ಷರು ಆಗಿದ್ದು ಪ್ರತಿ ತಿಂಗಳು ಪ್ರಗತಿ ಬಗ್ಗೆ ಪರಿಶೀಲನೆ/ಸೂಚನೆ/ಮಾರ್ಗದರ್ಶನ ನೀಡುತ್ತಾರೆ.

3) ನಿಯಮಿತವಾಗಿ ರಾಜ್ಯ ಮಟ್ಟದಲ್ಲಿ ಜಿಲ್ಲಾ ಆಕುಕ ಅಧಿಕಾರಿಗಳ ಸಭೆಯನ್ನು ಕರೆದು ಪ್ರಗತಿ ತೊಂದರೆ ಹಾಗೂ ಅವಶ್ಯಕತೆಗಳ ಬಗ್ಗೆ ವಿಮರ್ಶೆ ಮಾಡಲಾಗುತ್ತಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಮೇಲೆ ನಮೂದಿಸಿರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನೀಡಿರುವ ಮಾರ್ಗಸೂಚಿಯನ್ನು ಅನುಬಮಧ–4ರಲ್ಲಿ ಲಗತ್ತಿಸಲಾಗಿದೆ.

**ಅನುಬಂಧ–1**

**ಕಳೆದ ಎರಡು ವರ್ಷಗಳಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಕೈಗೊಂಡ ಹೊಸ ಯೋಜನೆಗಳು**

1) ಆರೋಗ್ಯ ಕವಚ ಯೋಜನೆ ಜಾರಿಯಾಗಿದೆ ಈ ಯೋಜನೆಯಡಿಯಲ್ಲಿ 108 ನಂಬರ್‌ಗೆ ಕರೆ ಮಾಡಿದ್ದಲ್ಲಿ ತುರ್ತು ಸಂದರ್ಭಗಳಲ್ಲಿ ಉಚಿತ ಆಂಬುಲೆನ್ಸ್ ಸೇವೆಗಳನ್ನು ಒದಗಿಸಲಾಗುತ್ತಿದೆ.

2) ತಾಯಿ ಭಾಗ್ಯ ಯೋಜನೆ:– ಈ ಯೋಜನೆಯಡಿ ಈ ಹಿಂದೆ ಇದ್ದ ಮಡಿಲು, ಜನನಿ ಸುರಕ್ಷಾ ಯೋಜನೆ, ಪ್ರಸೂತಿ ಆರೈಕೆಗಳನ್ನು ಒಟ್ಟು ಗೂಡಿಸಿ ಮತ್ತೊಂದು ಕಾಂಪೊನೆಂಟ್ ಆದ ತಾಯಿ ಭಾಗ್ಯ ಅನ್ನು ಸೇರಿಸಿ ಜಾರಿಗೊಳಿಸಲಾಗಿದೆ. ಜನನಿ ಸುರಕ್ಷಾ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ತಾಯಂದಿರಿಗೆ ಮೊದಲು ಎರಡು ಹೆರಿಗೆಗಳಿಗೆ ಸೀಮಿತಗೊಳಿಸಿ ಮನೆಯಲ್ಲೇ ಹೆರಿಗೆ ಆದರೆ ರೂ. 500, ಸಾಂಸ್ಥಿಕ ಹೆರಿಗೆಯಾದಲ್ಲಿ ರೂ. 700, ಸಿಜೇರಿಯನ್ ಹೆರಿಗೆ ಆದಲ್ಲಿ ರೂ. 1500 ಪಾವತಿಸಲಾಗುತ್ತದೆ. ಪ್ರಸೂತಿ ಆರೈಕೆ ಕಾರ್ಯಕ್ರಮದಡಿಯಲ್ಲಿ ಅಂತಹುದೇ ಫಲಾನುಭವಿಗಳಿಗೆ ರೂ. 2000 ಅಂದರೆ ರೂ. 1,000 ಅನ್ನು ಪ್ರಸವ ಪೂರ್ವದಲ್ಲಿ ಹಾಗೂ ರೂ. 1,000 ಹೆರಿಗೆ ಆದ ನಂತರ ತಾಯಿ/ಮಗುವಿನ ಪೌಷ್ಟಿಕಾಂಶ ಕೊರತೆ ನೀಗಿಸಲು ನೀಡಲಾಗುವುದು. ತಾಯಿ ಭಾಗ್ಯ ಕಾಂಪೊನೆಂಟ್ ಅಡಿಯಲ್ಲಿ ಒಪ್ಪಂದ ಮಾಡಿಕೊಂಡ ಖಾಸಗಿ ಆಸ್ಪತ್ರೆಗಳಲ್ಲಿ ನೂರು ಹೆರಿಗೆಗಳು ಆದಲ್ಲಿ ರೂ. 3.00 ಲಕ್ಷಗಳನ್ನು ಸದರಿ ಆಸ್ಪತ್ರೆಗೆ ನೀಡಲಾಗುವುದು ಹಾಗೂ ರೋಗಿಗೆ ನೀಡುವ ಚಿಕಿತ್ಸೆಯು ಉಚಿತವಾಗಿರುತ್ತದೆ.

3. ಆಶಾ ಕಾರ್ಯಕ್ರಮ. ಈ ಕಾರ್ಯಕ್ರಮದಡಿಯಲ್ಲಿ 1,000 ಜನಕ್ಕೆ ಒಬ್ಬ ಆಶಾ ಕಾರ್ಯಕರ್ತೆಯನ್ನು ಗ್ರಾಮೀಣ ಪ್ರದೇಶಗಳಲ್ಲಿ ಗುರುತಿಸಲಾಗಿದ್ದು, ಗ್ರಾಮೀಣ ಜನರಿಗೆ ಸಣ್ಣ ಪುಟ್ಟ ಕಾಯಿಲೆಗಳಿಗೆ ಔಷಧಿ ನೀಡುವುದು ಹಾಗೂ ತಾಯಿ ಮತ್ತು ಮಗುವಿನ ಆರೋಗ್ಯ ಒಳಗೊಂಡಂತ ಎಲ್ಲಾ ರಾಷ್ಟ್ರೀಯ

ಆರೋಗ್ಯ ಕಾರ್ಯಕ್ರಮಗಳಿಗೆ ಸಮುದಾಯ ಹಾಗೂ ಆರೋಗ್ಯ ಇಲಾಖೆಯ ನಡುವೆ ಸೇತುವೆಯಂತೆ ಕಾರ್ಯನಿರ್ವಹಿಸುತ್ತಾರೆ.

**ಮಡಿಲು:** ಬಾಣಂತಿ ಹಾಗೂ ನವಜಾತ ಶಿಶುಗಳ ಆರೈಕೆಗಾಗಿ ರೂ. 1,260ರ ಮೌಲ್ಯದ 19 ಸಾಮಾಗ್ರಿಗಳನ್ನೊಳಗೊಂಡ ಮಡಿಲು ಕಿಟ್‌ಗಳ (ತಾಯಿ ಹಾಗೂ ಮಗುವಿಗೆ ಉಪಯೋಗವಾಗುವ 19 ಸಾಮಾಗ್ರಿಗಳ ಕಿಟ್) ವಿತರಣೆ.

- ಫಲಾನುಭವಿಗಳು ಬಡತನ ರೇಖೆಗಿಂತ ಕೆಳಗಿರುವ ತಾಯಂದಿರು
- ಮೊದಲೆರಡು ಮಕ್ಕಳಿಗೆ ಸೀಮಿತ
- ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಹೆರಿಗೆಯಾದವರಿಗೆ

**ಜನನಿ ಸುರಕ್ಷಾ ವಾಹಿನಿ:** ಗರ್ಭಿಣಿ ಸ್ತ್ರೀಯರನ್ನು ಮತ್ತು ತೊಂದರೆಗೊಳಪಟ್ಟ ಶಿಶುಗಳನ್ನು ಆಸ್ಪತ್ರೆಗೆ ಅಂಬ್ಯುಲೆನ್ಸ್ ಮೂಲಕ ಕರೆದೊಯ್ಯುವುದು.

**ಸಂಚಾರಿ ಆರೋಗ್ಯ ಘಟಕ:** ಗುಡ್ಡಗಾಡು/ಆರೋಗ್ಯ ಸೇವೆಯನ್ನು ಒದಗಿಸಲು ಕಷ್ಟಕರವಾಗಿರುವ ಪ್ರದೇಶದಲ್ಲಿ ಸಂಚಾರಿ ವಾಹನದ ಮೂಲಕ ಆರೋಗ್ಯ ತಪಾಸಣೆ–31 ಘಟಕಗಳಿಗೆ ಚಾಲನೆ ನೀಡಲಾಗಿದೆ.

**ಆಯುಷ್:** ಒಂದೇ ಸೂರಿನಡಿಯಲ್ಲಿ ಅಲೋಪತಿ ವೈದ್ಯ ಪದ್ದತಿಯೊಂದಿಗೆ ಭಾರತೀಯ ವೈದ್ಯಪದ್ಧತಿಯ ಸೇವೆ ದೊರಕಿಸಿ ಕೊಡುವುದು. ಇದುವರೆಗೂ 483 ಆಯುಷ್ ವೈದ್ಯರನ್ನು ಡಾ: ನಂಜುಂಡಪ್ಪ ವರದಿಯಲ್ಲಿ ಗುರುತಿಸಲಾಗಿರುವ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಒಬ್ಬರೇ ಎಮ್.ಬಿ.ಬಿ.ಎಸ್. ವೈದ್ಯರು ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹೆಚ್ಚುವರಿಯಾಗಿ ಆಯುಷ್ ವೈದ್ಯರ ನೇಮಕಾತಿ ಮಾಡಲಾಗಿದೆ.

**ನಗರ ಆರೋಗ್ಯ ಕೇಂದ್ರ:** ಕೊಳಚೆ ಪ್ರದೇಶದ ಸಮುದಾಯಕ್ಕೆ ಆರೋಗ್ಯ ಸೇವೆ. ಇದುವರೆಗೂ 31 ನಗರ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿದ್ದು, 26 ಕೇಂದ್ರಗಳು ಪ್ರಾರಂಭವಾಗಿರುತ್ತದೆ.

**ನಾಗರೀಕ ಸಹಾಯ ವೇದಿಕೆ:** ಸಾರ್ವಜನಿಕರಿಗೆ ಆರೋಗ್ಯ ಸೇವೆಗಳ ಬಗ್ಗೆ ಮಾಹಿತಿ ಒದಗಿಸುವ ವೇದಿಕೆ. 20 ಜಿಲ್ಲೆ ಆಸ್ಪತ್ರೆಗಳಲ್ಲಿ ಸ್ಥಾಪನೆ.

ಅನುಬಂಧ–2

**Statement showing the District Wise Amount drawn by Cheque and Expenditure under RCH/NRHM Programme for the year 2007-08**

| Sl. No. | Component | OB for 2007-08 | Amount Drawn by Cheque | Total Budget | Expen diture | Balance |
|---|---|---|---|---|---|---|
| 1 | 2 | 3 | 4 | 5 | 6 | 7 |
| | **NRHM Component** | **27491** | **Bidar** | | | |
| 1 | United Fund & AMG to PHC's | 3025000 | 2600000 | 5625000 | 1254759 | 4370241.00 |
| 2 | Village Health & Sanitation | 0 | 5950000 | 5950000 | 5950000 | 0.00 |
| 3 | Mobile Medical Units: 26 MMU Proposed | 0 | 20000 | 20000 | 20000 | 0.00 |
| 4 | Corpus Grants of ARS: Dist Level & Tq Level | 0 | 2400000 | 2400000 | 2300000 | 100000.00 |
| 5 | District Action Plan Rs. 10 lakh to each Dist | 0 | 90000 | 90000 | 90000 | 0.00 |
| 6 | Sub Center United Fund | 1351800 | 2690000 | 4041800 | 1721563 | 2320237.00 |
| | **Total** | **4376800** | **13750000** | **18126800** | **11336322** | **6790478.00** |
| | **RCH Component** | **27292** | **Bidar** | | | |
| 1 | Doctor's Salary in Dists | 0 | 795712 | 795712 | 795712 | 0.00 |
| 2 | Ayush Doctors | 0 | 1147850 | 1147850 | 1147850 | 0.00 |
| 3 | DPM Salary | 0 | 172080 | 172080 | 172080 | 0.00 |
| 4 | Staff Nurse Salary 24x7 FRUS | 0 | 2066529 | 2066529 | 0 | 2066529.00 |
| 5 | Staff Nurse Salary FRU's | 0 | 81810 | 81810 | 81810 | 0.00 |

| 1 | 2 | 3 | 4 | 5 | 6 | 7 |
|---|---|---|---|---|---|---|
| 6 | Staff Nurse Salary in C Dists | 0 | 933466 | 933466 | 933466 | 0.00 |
| 7 | Lab Technicial Salary | 0 | 64940 | 64940 | 64940 | 0.00 |
| 8 | Programme Assistant Salary | 0 | 67213 | 67213 | 67213 | 0.00 |
| 9 | Remote area allow for Doctor | 0 | 381710 | 381710 | 0 | 381710.00 |
| 10 | Remote area allow for Staff Nurse | 0 | 116000 | 116000 | 116000 | 0.00 |
| 11 | Honorium to 24 Nighty Hourse Delivery | 0 | 434950 | 434950 | 434950 | 0.00 |
| 12 | Incentive to TBA | 0 | 36600 | 36600 | 36600 | 0.00 |
| 13 | Contingency | 1703 | 194914 | 196617 | 194914 | 1703.00 |
| 14 | Outreach services (Hiring Vehicle) | 0 | 279000 | 279000 | 279000 | 0.00 |
| 15 | Public Private Partnership (Aneshesia) | 0 | 12500 | 12500 | 12500 | 0.00 |
| 16 | FW Compensation | 0 | 1862103 | 1862103 | 1538598 | 323505.00 |
| 17 | JSY | 0 | 7455000 | 7455000 | 5920310 | 1534690.00 |
| 18 | Pulse Polio Programme | 0 | 2001300 | 2001300 | 2001300 | 0.00 |
| 19 | Chinkugunya | 0 | 99999 | 99999 | 99999 | 0.00 |
| 20 | Asha Selection | 0 | 500000 | 500000 | 0 | 500000.00 |
| . | Total | 1703 | 18703676 | 18705379 | 13897242 | 4808137.00 |
| RI | Component | 27405 | Bidar | | | |
| 1 | Alternative Vaccine Delivery | 40 | 293950 | 293990 | 293990 | 0.00 |
| 2 | Mobilisation of Children | 0 | 476050 | 476050 | 476050 | 0.00 |

| 1 | 2 | 3 | 4 | 5 | 6 | 7 |
|---|---|---|---|---|---|---|
| 3 | Mobility Support (POL) to DIOs | 0 | 44141 | 44141 | 44141 | 0.00 |
| 4 | Urban & Slum Immunization | 0 | 100700 | 100700 | 100700 | 0.00 |
| 5 | Computer Assistant Salary | 0 | 73590 | 73590 | 73590 | 0.00 |
| | **Total** | **40** | **988431** | **988471** | **988471** | **0.00** |
| | **Grand Total** | **4378543** | **33442107** | **37820650** | **2622035** | **11598615.00** |

ಅನುಬಂಧ–3

## National Rural Health Mission

## District Health Society (R), Bidar

## Statement showing the fund released and expenditure received from District Health Society's during the year 2008-09 from April 08 to March 09

**Rs. in lakhs**

| Sl. No. | Compo nent | Open ing Balance | Amount released to District Health Society | Total Advances at District Health Society | Expendi ture received from District Health Society | Re fund | Balance |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | **Program : Ayush** | | | | |
| | Total | | | | | | |
| | | | **Program : IDSP** | | | | |
| 1 | IEC IDSP | 0.00 | 32000.00 | 32000.00 | 35000.00 | 0.00 | -3000.00 |
| 2 | Lab: Equipment Con sumables | 0.00 | 135000.00 | 135000.00 | 95834.00 | 0.00 | 39166.00 |
| 3 | Operational Cost | 0.00 | 0.00 | 0.00 | 14898.00 | 0.00 | -14898.00 |
| | Total | 0.00 | 167000.00 | 167000.00 | 145732.00 | 0.00 | 21268.00 |
| | | | **Program : NIDDP** | | | | |
| 1 | IDD Survey | 0.00 | 2000.00 | 2000.00 | 0.00 | 0.00 | 2000.00 |
| | **Total** | **0.00** | **2000.00** | **2000.00** | **0.00** | **0.00** | **2000.00** |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| **Program : NLEP** | | | | | | | |
| 1 | Contin gency-NLEP | 0.00 | 252300.00 | 252300.00 | 80541.00 | 0.00 | 171759.00 |
| 2 | Contractual Services NLEP | 28736.00 | 4800.00 | 33536.00 | 0.00 | 0.00 | 33536.00 |
| 3 | IEC-NLEP | 0.00 | 158950.00 | 158950.00 | 0.00 | 0.00 | 158950.00 |
| 4 | Recurring Expenses NLEP | 0.00 | 26000.00 | 26000.00 | 40001.00 | 0.00 | -14001.00 |
| 5 | Supportive Medicines & Materials | 0.00 | 20000.00 | 20000.00 | 23250.00 | 0.00 | -3250.00 |
| 6 | Training & Review meetings | 0.00 | 12300.00 | 12300.00 | 0.00 | 0.00 | 12300.00 |
| | Total | 28736.00 | 474350.00 | 503086.00 | 143792.00 | 0.00 | 359294.00 |
| **Program : NPCB** | | | | | | | |
| 1 | Cataract Surgeries | 0.00 | 1600000.00 | 1600000.00 | 1139531.00 | 0.00 | 460469.00 |
| 2 | Eye banks develop ment | 88219.00 | 0.00 | 88219.00 | 0.00 | 0.00 | 88219.00 |
| 3 | School Eyes screeing | 0.00 | 107400.00 | 107400.00 | 0.00 | 0.00 | 107400.00 |
| | Total | 88219.00 | 1707400.00 | 1795619.00 | 1139531.00 | 0.00 | 656088.00 |
| **Program : NPCD** | | | | | | | |
| | Total | | | | | | |
| **Program : NPCB** | | | | | | | |
| | Total | | | | | | |
| **Program : NRHM** | | | | | | | |
| 1 | Ayush Doctors for Single Doctor PHC | 0.00 | 2449150.00 | 2449150.00 | 1353667.00 | 713600.00 | 381883.00 |
| 2 | Block Program Manage ment Unit | 0.00 | 1067044.00 | 1067044.00 | 715566.00 | 150000.00 | 201478.00 |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 3 | Concurrent Audit | 0.00 | 25000.00 | 25000.00 | 12020.00 | 0.00 | 12980.00 |
| 4 | District United Funds | 0.00 | 300000.00 | 300000.00 | 0.00 | 0.00 | 300000.00 |
| 5 | Drivers each for Ambulance 149 CHCs Maintains Grant to 100 Bedded Hospitals | 0.00 | 806400.00 | 806400.00 | 239113.00 | 300000.00 | 26728.00 |
| 6 | Maintains Grant to 100 Bedded Hospitals | 0.00 | 400000.00 | 400000.00 | 165733.00 | 0.00 | 234267.00 |
| 7 | Manage ment Cost NRHM | 0.00 | 3925.00 | 3925.00 | 0.00 | 0.00 | 3925.00 |
| 8 | Mobile Phones recurring cost | 0.00 | 14802.00 | 14802.00 | 11000.00 | 0.00 | 3802.00 |
| 9 | Prasuthi Arike | 0.00 | 6640000.00 | 6640000.00 | 3232000.00 | 0.00 | 3408000.00 |
| 10 | Rent for sub-centre | 0.00 | 288000.00 | 288000.00 | 288000.00 | 0.00 | 0.00 |
| 11 | RKS at CHs | 100000.00 | 1200000.00 | 1300000.00 | 355939.00 | 0.00 | 944061.00 |
| 12 | RKS at District Hospital | 0.00 | 500000.00 | 500000.00 | 0.00 | 0.00 | 500000.00 |
| 13 | Second ANM/ Staff Nurse at SCs only in 6 backward | 0.00 | 4212000.00 | 4212000.00 | 1762464.00 | 2217000.00 | 232536.00 |
| 14 | SIH Equip ments Training | 0.00 | 100000.00 | 100000.00 | 0.00 | 0.00 | 100000.00 |
| 15 | Specialist camps at Dist. Hospital every months | 0.00 | 450000.00 | 450000.00 | 410229.00 | 0.00 | 39771.00 |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 16 | Specialist camps at Talukas every months | 0.00 | 585000.00 | 585000.00 | 540000.00 | 45000.00 | 0.00 |
| 17 | Thayi Bhagya | 0.00 | 6360000.00 | 6360000.00 | 150000.00 | 0.00 | 6210000.00 |
| 18 | Training for ASHA/ Link | 500000.00 | 9468755.00 | 9968755.00 | 4032995.00 | 0.00 | 5935760.00 |
| 19 | United Funds to SCs | 2320237.00 | 3750000.00 | 6070237.00 | 5010000.00 | 1060000.00 | 237.00 |
| 20 | United funds Main tenance grant to CHCs | 0.00 | 1500000.00 | 1500000.00 | 1200000.00 | 300000.00 | 0.00 |
| 21 | United funds Main tenance grant to PHCs | 4370241.00 | 3750000.00 | 8120241.00 | 6602566.00 | 105000.0 | 467675.00 |
| 22 | VHSC | 0.00 | 6470000.00 | 6470000.00 | 6470000.00 | 0.00 | 0.00 |
| | **Total** | **7290478.00** | **50340076.0** | **57630554.00** | **32551292.00** | **5835600.00** | **19243662** |
| **Program : NVBDCP** | | | | | | | |
| 1 | Dengue & Chikungunya | 0.00 | 120000.00 | 120000.00 | 68000.00 | 0.00 | 52000.00 |
| 2 | ELF | 0.00 | 1387000.00 | 1387000.00 | 0.00 | 0.00 | 1037000.00 |
| 3 | Kala-azar | 0.00 | 0.00 | 0.00 | 1190350.00 | 0.00 | -1190350.00 |
| 4 | Malaria | 92136.00 | 0.00 | 92136.00 | 0.00 | 0.00 | 92136.00 |
| 5 | World Bank (Including training & IEC) | 20000.00 | 108000.00 | 128000.00 | 0.00 | 0.00 | 128000.00 |
| | Total | 112136.00 | 1615000.00 | 1727136.00 | 1258350.00 | 0.00 | 46876.00 |
| **Program : RCH** | | | | | | | |
| 1 | Ambulance Driver RCH | 0.00 | 240000.00 | 240000.00 | 0.00 | 240000.00 | 0.00 |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 2 | Appoint ment of ANM/ Staff Nurse | 0.00 | 1000000.00 | 1000000.00 | 0.00 | 1000000.00 | 0.00 |
| 3 | ASHA link workers | 0.00 | 0.00 | 0.00 | 500000.00 | 0.00 | -50000.00 |
| 4 | Assist to Staff Nurse for night stay | 0.00 | 306000.00 | 306000.00 | 295460.00 | 0.00 | 10540.00 |
| 5 | Ayush Doctors Salary | 0.00 | 2169600.00 | 2169600.00 | 1752703.00 | 332770.00 | 84127.00 |
| 6 | BCC/IEC | 0.00 | 260600.00 | 260600.00 | 185100.00 | 0.00 | 75500.00 |
| 7 | Best ANM Award | 0.00 | 25000.00 | 25000.00 | 0.00 | 0.00 | 25000.00 |
| 8 | Best Doctor Award | 0.00 | 10000.00 | 10000.00 | 0.00 | 0.00 | 10000.00 |
| 9 | Best Staff Nurse Award | 0.00 | 7500.00 | 7500.00 | 0.00 | 0.00 | 7500.00 |
| 10 | Dist Accounts Manager Salary | 0.00 | 90000.00 | 90000.00 | 58550.00 | 0.00 | 31450.00 |
| 11 | DPMU & Prog Assist Hono rarium | 0.00 | 395406.00 | 395406.00 | 231008.00 | 110000.00 | 54398.00 |
| 12 | Emergency OBG CAre | 0.00 | 90000.00 | 90000.00 | 8000.00 | 0.00 | 82000.00 |
| 13 | Family Planning | 323505.00 | 9883720.00 | 10207225.0 | 3973030.00 | 2000000.0 | 4234195.00 |
| 14 | Incentive for ANMs for HIV positive cases | 0.00 | 7500.00 | 7500.00 | 0.00 | 0.00 | 7500.00 |
| 15 | Incentive for ANMs high risk preg | 0.00 | 1395000.00 | 1395000.00 | 1100250.00 | 0.00 | 294750.00 |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 16 | Incentive to trained MBBS doctors & TA/DA for EMOC | 0.00 | 90000.00 | 90000.00 | 0.00 | 90000.00 | 0.00 |
| 17 | JSY | 1534690.00 | 10500000.00 | 12034690.00 | 9486079.00 | 0.00 | 2548611.00 |
| 18 | Lab Technician Salary | 0.00 | 198140.00 | 198140.00 | 15310.00 | 182830.00 | 0.00 |
| 19 | Laparo scopic repairs | 0.00 | 100000.00 | 100000.00 | 0.00 | 100000.00 | 0.00 |
| 20 | Manage ment Cost | 1703.00 | 517380.00 | 519083.00 | 453698.00 | 0.00 | 65385.00 |
| 21 | Maternal Death audit | 0.00 | 8000.00 | 8000.00 | 7600.00 | 0.00 | 400.00 |
| 22 | Mobility support for PHC | 0.00 | 246000.00 | 246000.00 | 243000.00 | 0.00 | 3000.00 |
| 23 | Mobility support at Sub-Centre ANM | 0.00 | 753600.00 | 753600.00 | 631800.00 | 0.00 | 121800.00 |
| 24 | NSV Programme | 0.00 | 300000.00 | 300000.00 | 286500.00 | 0.00 | 13500.00 |
| 25 | PHC medical officers on contract | 0.00 | 1706769.00 | 1706769.00 | 1213440.00 | 0.00 | 493329.00 |
| 26 | PT (RCH) | 0.00 | 16600.00 | 16600.00 | 0.00 | 0.00 | 16600.00 |
| 27 | Remote area allowances Doctors and Staff nurse | 0.00 | 170440.00 | 1704400.00 | 123600.00 | 0.00 | 468400.00 |
| 28 | Specialists for taluka hospitals | 0.00 | 1200000.00 | 1200000.00 | 132500.00 | 600000.00 | 467500.00 |
| 29 | Staff Nurse 24x7 | 0.00 | 12543925.00 | 12543925.0 | 8308864.00 | 0.00 | 4235061.00 |
| 30 | Staff nurse for FRUs0 | .00 | 804030.00 | 804030.00 | 113900.00 | 300000.00 | 390120.00 |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 31 | Urban RCH | 0.00 | 564000.00 | 564000.00 | 0.00 | 282000.00 | 282000.00 |
| | **Total** | **1859898.00** | **47133170.00** | **48993068.0** | **30232802.0** | **4237600.0** | **14522666.0** |
| **Program : RI** | | | | | | | |
| 1 | Alternative Vaccine Delivery | 0.00 | 462000.00 | 462000.00 | 388950.00 | 0.00 | 73050.00 |
| 2 | Cold Chain Mainte nances | 0.00 | 85000.00 | 85000.00 | 80787.00 | 0.00 | 4213.00 |
| 3 | Computer Assistance Hono rarium | 0.00 | 97380.00 | 97380.00 | 80280.00 | 0.00 | 17100.00 |
| 4 | Focus on slum & under served areas | 0.00 | 445900.00 | 445900.00 | 254450.00 | 0.00 | 191450.00 |
| 5 | Mobilisa tion through AWW | 0.00 | 924000.00 | 924000.00 | 673460.00 | 0.00 | 250540.00 |
| 6 | Mobility Support | 0.00 | 52000.00 | 52000.00 | 28148.00 | 0.00 | 23852.00 |
| 7 | POL for vaccine delivery | 0.00 | 32650.00 | 32650.00 | 2385.00 | 0.00 | 30265.00 |
| 8 | Pulse Polio Programme | 0.00 | 2638100.00 | 2638100.00 | 2545700.00 | 0.00 | 92400.00 |
| 9 | Social Mobilisa tion in Urban Areas | 0.00 | 151750.00 | 151750.00 | 19475.00 | 0.00 | 132275.00 |
| 10 | Training & review | 0.00 | 100000.00 | 100000.00 | 74000.00 | 0.00 | 26000.00 |
| | Total | 0.00 | 4988780.00 | 4988780.00 | 4147635.00 | 0.00 | 841145.0 |
| **Program : RNTCP** | | | | | | | |
| 1 | Civil Works | 0.00 | 15300.00 | 15300.00 | 23500.00 | 0.00 | -8200.00 |
| 2 | Contractual Services | 0.00 | 538650.00 | 538650.00 | 962683.00 | 0.00 | -424033.00 |
| 3 | Equipment Mainte nance | 0.00 | 14000.00 | 14000.00 | 34529.00 | 0.00 | -20529.00 |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 4 | Hono rarium | 47110.00 | 994643.00 | 1041753.00 | 19250.00 | 0.00 | 1022503.00 |
| 5 | IEC RNTCP | 0.00 | 38497.00 | 38497.00 | 0.00 | 0.00 | 38497.00 |
| 6 | Lab Materials | 0.00 | 112000.00 | 112000.00 | 321909.00 | 0.00 | -209909.00 |
| 7 | Medical Colleges | 0.00 | 72000.00 | 72000.00 | 0.00 | 0.00 | 72000.00 |
| 8 | Miscella neous | 0.00 | 67400.00 | 67400.00 | 109158.00 | 0.00 | -41758.00 |
| 9 | Printing | 0.00 | 44000.00 | 44000.00 | 54920.00 | 0.00 | -10920.00 |
| 10 | Training RNTCP | 0.00 | 71708.00 | 71709.08 | 57895.00 | 0.00 | 18805.00 |
| 11 | Vehicle hiring RNTCP | 0.00 | 79200.00 | 79200.00 | 700.00 | 0.00 | 78500.00 |
| 12 | Vehicle Main tenance | 0.00 | 0.00 | 0.00 | 70081.00 | 0.00 | -70081.00 |
| | **Total** | **47110.00** | **2047390.00** | **2094500.00** | **1712020.00** | **0.00** | **382480.00** |
| | **Grand Total** | **9426577.00** | **108475166** | **117901743** | **71331154.00** | **10073200** | **36497389** |

**ಅನುಬಂಧ–4**

**ಸರ್ಕಾರಿ ಆದೇಶ ಸಂಖ್ಯೆ: ಆಕುಕ 345 ಸಿಜಿಎಂ 2008, ದಿನಾಂಕ 10–10–2008**

**ತಾಯಿ–ಭಾಗ್ಯ ಯೋಜನೆಯ ವಿವರ ಹಾಗೂ ಸಂಕ್ಷಿಪ್ತ ಮಾರ್ಗಸೂಚಿಗಳು**

**ತಾಯಿ–ಭಾಗ್ಯ ಯೋಜನೆ**

ತಾಯಿ–ಮಕ್ಕಳ ಆರೋಗ್ಯವನ್ನು ಸುಧಾರಣೆ ಮಾಡುವುದಕ್ಕಾಗಿ ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಎಲ್ಲಾ ಕಾರ್ಯಕ್ರಮಗಳ ಉದ್ದೇಶ ಶಿಶು ಮರಣವನ್ನು ಹಾಗೂ ತಾಯಂದಿರ ಮರಣ ಪ್ರಮಾಣವನ್ನು ಕಡಿಮೆ ಮಾಡುವುದು. ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಶಿಶು ಮರಣ ಪ್ರಮಾಣವು ಒಂದು ಸಾವಿರ ಜೀವಂತ ಜನನಗಳಿಗೆ 48 ಇದ್ದು, ಅದನ್ನು 2010ರ ವೇಳೆಗೆ 30ಕ್ಕೆ ಇಳಿಸುವ ಗುರಿಯನ್ನು ಹೊಂದಲಾಗಿದೆ. ಹಾಗೆಯೇ ರಾಜ್ಯದಲ್ಲಿ ಪ್ರಸ್ತುತ ತಾಯಂದಿರ ಮರಣ ಪ್ರಮಾಣವು ಒಂದು ಲಕ್ಷ ಜೀವಂತ ಜನನಗಳಿಗೆ 228 ಇದ್ದು, ಇದನ್ನು 2010ನೇ ಇಸವಿಯ ವೇಳೆಗೆ 150ಕ್ಕೆ ತರಲು ಪ್ರಯತ್ನಪಡಲಾಗುತ್ತಿದೆ. ಶಿಶು ಮರಣ ಪ್ರಮಾಣ ಹಾಗೂ

ತಾಯಂದಿರ ಮರಣ ಪ್ರಮಾಣವನ್ನು ಕಡಿಮೆಗೊಳಿಸುವಲ್ಲಿ ಲಭ್ಯವಿರುವ ಮುಖ್ಯ ವಿಧಾನ ಸಾಂಸ್ಥಿಕ (ಆಸ್ಪತ್ರೆಗಳ) ಹೆರಿಗೆಗಳನ್ನು ಹೆಚ್ಚು ಹೆಚ್ಚು ಮಾಡುವುದು.

ಸಾಂಸ್ಥಿಕ ಹೆರಿಗೆಗಳನ್ನು ಬಡತನದ ರೇಖೆಗಿಂತ ಕೆಳಗಿರುವ ಕುಟುಂಬದ ಮಹಿಳೆಯರಲ್ಲಿ ಹೆಚ್ಚಿಸುವ ಉದ್ದೇಶದಿಂದ ಪ್ರಸ್ತುತ ವರ್ಷದಿಂದ ಈ ತಾಯಿ-ಭಾಗ್ಯ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಈ ತಾಯಿ-ಭಾಗ್ಯ ಯೋಜನೆಯಡಿ ಕೆಳಕಂಡ 4 ಅಂಗಗಳು (Components) ಒಳಗೊಂಡಿರುತ್ತವೆ;

1) ಜನನಿ ಸುರಕ್ಷಾ;
2) ಪ್ರಸೂತಿ ಅರೈಕೆ
3) ಮಡಿಲು
4) ತಾಯಿ ಭಾಗ್ಯ

ಕರ್ನಾಟಕ ಸರ್ಕಾರವು ಮೇಲ್ಕಂಡ ಎಲ್ಲಾ 4 ಅಂಗಗಳನ್ನು ಒಂದು ಗೂಡಿಸಿ ತಾಯಿ-ಭಾಗ್ಯ ಯೋಜನೆಯನ್ನು ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳಿಸಲು ರೂ. 30 ಕೋಟಿಗಳನ್ನು ಆಯವ್ಯಯದಲ್ಲಿ ಒದಗಿಸಿದೆ. ಪ್ರಸ್ತುತ ಸಾಲಿನಲ್ಲಿ ಇಡೀ ರಾಜ್ಯದಲ್ಲಿ ಅಂದಾಜು 10 ಲಕ್ಷ ಹೆರಿಗೆಗಳು ಆಗುತ್ತಿದ್ದು, ಆ ಪೈಕಿ ಶೇಕಡ 70ರಷ್ಟು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸೇರಿದವರಾಗಿದ್ದಾರೆ. ಅದರಲ್ಲಿ ಸುಮಾರು ಶೇಕಡ 40ರಷ್ಟು ಹೆರಿಗೆಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಆಗುತ್ತದೆ. ಅದರಂತೆ 2.8 ಲಕ್ಷ ಎರಡು ಜೀವಂತ ಮಕ್ಕಳ ತಾಯಂದಿರು ಈ ನೂತನ ಕಾರ್ಯಕ್ರಮದಿಂದ ಪ್ರಯೋಜನವನ್ನು ಪಡೆಯುತ್ತಾರೆ ಎಂದು ಅಂದಾಜು ಮಾಡಲಾಗಿದೆ.

ತಾಯಿ ಭಾಗ್ಯ ಯೋಜನೆಯ ಪ್ರತಿ ಅಂಗದ ವಿವರಗಳು ಕೆಳಕಂಡಂತಿವೆ:

**ಜನನಿ ಸುರಕ್ಷಾ:**

ಜನನಿ ಸುರಕ್ಷಾ ಅಡಿಯಲ್ಲಿ ಬಡತನದ ರೇಖೆಗಿಂತ ಕೆಳಗಿರುವ ಮಹಿಳೆಯರಿಗೆ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಮಹಿಳೆಯರಿಗೆ ಮನೆಯಲ್ಲಿ ಹೆರಿಗೆಯಾದಲ್ಲಿ 500 ರೂಪಾಯಿಗಳು, ಸಂಸ್ಥೆಗಳಲ್ಲಿ ಹೆರಿಗೆಯಾದಲ್ಲಿ ನಗರ ಪ್ರದೇಶದಲ್ಲಿ 600 ರೂಪಾಯಿಗಳು ಮತ್ತು ಗ್ರಾಮಾಂತರ ಪ್ರದೇಶದಲ್ಲಿ 700 ರೂಪಾಯಿಗಳು ಹಾಗೂ ಸಿಸೇರಿಯನ್ ಶಸ್ತ್ರ ಚಿಕಿತ್ಸೆಯಾದಲ್ಲಿ 1500 ರೂಪಾಯಿಗಳನ್ನು ನೀಡಲಾಗುತ್ತದೆ. ಸರ್ಕಾರಿ ಆಸ್ಪತ್ರೆಗಳಲ್ಲದೆ ಅಂಗೀಕೃತವಾದ ಖಾಸಗಿ ಸಂಸ್ಥೆಗಳಲ್ಲಿ ಹೆರಿಗೆಯಾದಲ್ಲೂ ಕೂಡ ಈ ಸೌಲಭ್ಯ ಲಭ್ಯವಿರುತ್ತದೆ.

ಜನನಿ ಸುರಕ್ಷಾ ಹಿಂದಿನ ರಾಷ್ಟ್ರೀಯ ಹೆರಿಗೆ ಭತ್ಯೆ ಯೋಜನೆಯ ಮುಂದುವರಿದ ಯೋಜನೆಯಾಗಿರುತ್ತದೆ. ಇದು ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿ ಮಹಿಳೆಯರಿಗೆ ಹೆರಿಗೆ ಸಂದರ್ಭದಲ್ಲಿ ಆರ್ಥಿಕ ಸಹಾಯದ ಉದ್ದೇಶ ಹೊಂದಿರುತ್ತದೆ. ಜನನಿ ಸುರಕ್ಷಾ ಯೋಜನೆಯನ್ನು ಸೆಪ್ಟೆಂಬರ್ 2005ರಿಂದ ಕರ್ನಾಟಕದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಈ ಕಾರ್ಯಕ್ರಮದ ಉದ್ದೇಶವೆಂದರೆ ತಾಯಿ ಮತ್ತು ಶಿಶು ಮರಣ ಪ್ರಮಾಣವನ್ನು ಕಡಿಮೆಗೊಳಿಸುವುದು, ಎಲ್ಲಾ ಗರ್ಭಿಣಿಯರಿಗೆ ವೈದ್ಯಕೀಯ ಸೇವೆಯನ್ನು ನೀಡುವುದು, ಹಿಂದುಳಿದ ಗುಡ್ಡಗಾಡು ಪ್ರದೇಶದ ಮತ್ತು ಕಠಿಣ ಪ್ರದೇಶಗಳಲ್ಲಿರುವ ಗರ್ಭಿಣಿ ಮಹಿಳೆಯರಿಗೆ ಆದ್ಯತೆ ನೀಡುವುದು, ಕ್ಲಿಷ್ಟಕರ ಹೆರಿಗೆಯ ಸಂದರ್ಭದಲ್ಲಿ ತುರ್ತು ಸಿಸೇರಿಯನ್ ಶಸ್ತ್ರಚಿಕಿತ್ಸೆಗೆ ಅವಕಾಶ, ವೈದ್ಯ ತಪಾಸಣೆಗೆ ಗರ್ಭಿಣಿಗೆ ಉತ್ತೇಜನ, ಆಸ್ಪತ್ರೆಯಲ್ಲಿ ಹೆರಿಗೆಗೆ ಪ್ರೋತ್ಸಾಹ, ಖಾಸಗಿ ಸಂಸ್ಥೆಗಳ ಸೇವಾ ಪಾಲುದಾರಿಕೆ ಮತ್ತು ಸಣ್ಣ ಕುಟುಂಬಕ್ಕೆ ಪ್ರೋತ್ಸಾಹ.
ಈ ಕಾರ್ಯಕ್ರಮದ ಫಲಾನುಭವಿಗಳ ಅರ್ಹತೆ ಈ ಕೆಳಕಂಡಂತಿದೆ:

- ಮನೆ/ಉಪಕೇಂದ್ರ/ಸರ್ಕಾರಿ ಆಸ್ಪತ್ರೆ/ನೊಂದಾಯಿತ ಖಾಸಗಿ ಆಸ್ಪತ್ರೆಯಲ್ಲಿ ಸಾಮಾನ್ಯ ವಾರ್ಡಿಗೆ ದಾಖಲಾಗಿರುವ ಮಹಿಳೆಯು ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯಾಗಿರಬೇಕು.
- ಪ್ರಸ್ತುತ ಹೆರಿಗೆ ಮೊದಲನೇ ಅಥವಾ ಎರಡನೇ ಜೀವಂತ ಹೆರಿಗೆಯಾಗಿರಬೇಕು.
- ಮಹಿಳೆಯು 19 ವರ್ಷಕ್ಕಿಂತ ಮೇಲ್ಪಟ್ಟಿರಬೇಕು ಹಾಗೂ ಕನಿಷ್ಠ 3 ಬಾರಿ ವೈದ್ಯರಿಂದ ತಪಾಸಣೆ ಮಾಡಿಸಿಕೊಂಡು ಕಬ್ಬಿಣದಂಶದ ಮಾತ್ರೆ ಮತ್ತು ಟಿ.ಟಿ. ಚುಚ್ಚುಮದ್ದನ್ನು ಪಡೆದಿರಬೇಕು.
- ಬಡತನ ರೇಖೆಗಿಂತ ಮೇಲ್ಪಟ್ಟ ಆದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರು ಸರ್ಕಾರಿ/ಖಾಸಗಿ ನೊಂದಾಯಿತ ಆಸ್ಪತ್ರೆಗಳ ಸಾಮಾನ್ಯ ವಾರ್ಡಿಗೆ ದಾಖಲಾಗಿದ್ದರೂ ಈ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ.

ಮಡಿಲು/ಜೆ.ಎಸ್.ವೈ. ಯೋಜನೆಯಡಿ ಅರ್ಹತೆ ಇರಲಿ ಇಲ್ಲದಿರಲಿ ಗರ್ಭಿಣಿ ಎಂದು ಶಂಕೆ ಬಂದ ಕೂಡಲೇ ಶೀಘ್ರವಾಗಿ ತಾಯಿ ಕಾರ್ಡ್‌ನ್ನು

ಸಾರ್ವತ್ರಿಕವಾಗಿ ಎಲ್ಲಾ ಗರ್ಭಿಣಿಯರಿಗೂ ಭರ್ತಿ ಮಾಡಿ ನೀಡಬೇಕು. ನಂತರ ಜೆ.ಎಸ್.ವೈ ಮತ್ತು ಮಡಿಲುಗೆ ಅರ್ಹತೆ ಇದೆ ಎಂದು ತಿಳಿದು ಬಂದ ಕೂಡಲೇ ತಾಯಿ ಕಾರ್ಡಿನ ಭಾಗ–1, 2, 3ರಲ್ಲಿ ಮಾಹಿತಿ ದಾಖಲಿಸಿ ವೈದ್ಯರಿಂದ ದೃಢೀಕರಿಸಬೇಕು. ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ತಮ್ಮ ದೈನಂದಿನ ಮನೆ ಭೇಟಿ ಸಂದರ್ಭದಲ್ಲಿ ಗರ್ಭಿಣಿ ದಾಖಲು ಮಾಡುವ ಸಮಯದಲ್ಲಿ ಅರ್ಹತೆಯುಳ್ಳ ಮಹಿಳೆಯರನ್ನು ಗುರುತಿಸಿ ಗರ್ಭಿಣಿ ದಾಖಲಾತಿ ಪುಸ್ತಕದಲ್ಲಿ ನೊಂದಣಿ ಮಾಡಬೇಕು.

ತಾಯಿ ಕಾರ್ಡಿನ ಕ್ರಮ ಸಂಖ್ಯೆಯನ್ನು ನಮೂದಿಸಿ ಆಕೆಯನ್ನು ಜೆ.ಎಸ್.ವೈ. ಅರ್ಹ ಮಹಿಳೆ ಎಂದು ಎಎನ್‌ಸಿ ದಾಖಲಾತಿ ಪುಸ್ತಕದಲ್ಲಿ ಗುರುತಿಸಬೇಕು. ತಾಯಿ ಕಾರ್ಡಿನ ಮೊದಲ ಭಾಗದಲ್ಲಿ ಗರ್ಭಿಣಿಯ ಹೆಸರು, ವಿಳಾಸ, ಬಿ.ಪಿ.ಎಲ್. ಕಾರ್ಡ್ ಸಂಖ್ಯೆ, ಹೆರಿಗೆಯ ನಿರೀಕ್ಷಿತ ದಿನಾಂಕ ಇತ್ಯಾದಿಗಳನ್ನು ನಮೂದಿಸಬೇಕು ಮತ್ತು ಈ ರೀತಿ ನಮೂದು ಮಾಡುವುದು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಿಗೆ ನಿರಂತರ ಅಭ್ಯಾಸವಾಗಬೇಕು.

ಗರ್ಭಿಣಿ ಮಹಿಳೆಗೆ ಅರ್ಹತೆಯಿದ್ದು, ಆದರೆ ಅವರ ಬಳಿ ಬಿ.ಪಿ.ಎಲ್. ಕಾರ್ಡ್ ಇಲ್ಲದಿದ್ದ ವಿಶೇಷ ಸಂದರ್ಭದಲ್ಲಿ ಆಶಾ ಅಥವಾ ಅಂಗನವಾಡಿ ಕಾರ್ಯಕರ್ತೆಯರಿಗೆ ವಿಷಯ ತಿಳಿಸಿ ಅವರುಗಳ ಮುಖಾಂತರ ನಿಗದಿತ ಕಂದಾಯ ಅಧಿಕಾರಿಗಳಿಂದ ಅಥವಾ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಿಂದ ರೂ. 17,000ಕ್ಕಿಂತ ಕಡಿಮೆ ವಾರ್ಷಿಕ ಆದಾಯ ಎಂದು ವರಮಾನ ದೃಢೀಕರಣ ಪತ್ರ ತೆಗೆದುಕೊಳ್ಳಲು ಅರಿವು ಮೂಡಿಸಬೇಕು.

ತಾಯಿ ಕಾರ್ಡಿನಲ್ಲಿ ಸಿಗುವ ಸೌಲಭ್ಯಗಳ (ಜೆ.ಎಸ್.ವೈ ಹಣ ಮತ್ತು ಮಡಿಲು) ಬಗ್ಗೆ ಮನವರಿಕೆ ಮಾಡಿಕೊಟ್ಟು ಕಾರ್ಡನ್ನು ಜೋಪಾನವಾಗಿರಿಸಿ ಹೆರಿಗೆ ಸಮಯದಲ್ಲಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಬೇಕೆಂದು ತಿಳಿಸಬೇಕು ಮತ್ತು ಆಸ್ಪತ್ರೆ ಹೆರಿಗೆಗೆ ಉತ್ತೇಜಿಸಬೇಕು. ಗರ್ಭಿಣಿಯನ್ನು ಒಮ್ಮೆಯಾದರೂ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ತಾಯಿ ಕಾರ್ಡಿನ ಜೆ.ಎಸ್.ವೈ. ದಾಖಲಾತಿ ಪುಟದಲ್ಲಿನ ಮೊದಲನೇ ಭಾಗದಲ್ಲಿ ವೈದ್ಯಾಧಿಕಾರಿಯಿಂದ ದೃಢೀಕರಿಸಬೇಕು. ಹೀಗೆ ದೃಢೀಕರಿಸಿದ ದಾಖಲಾತಿ ಇದ್ದಲ್ಲಿ ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಹೆರಿಗೆಯಾದರೂ ಹೆರಿಗೆ ಸಂಭವಿಸಿದ ಉಪಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಕೇಂದ್ರ, ತಾಲ್ಲೂಕು ಆಸ್ಪತ್ರೆ, ಜಿಲ್ಲಾ

ಆಸ್ಪತ್ರೆ, ಸ್ಥಳೀಯ ಸಂಸ್ಥೆಗಳ ಆಸ್ಪತ್ರೆಗಳು ಮತ್ತು ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಮಹಿಳೆಗೆ ಜೆ.ಎಸ್.ವೈ. ಸೌಲಭ್ಯ ದೊರಕುವುದು.

**ಪ್ರಸೂತಿ ಆರೈಕೆ:**

ಪ್ರಸೂತಿ ಆರೈಕೆ ಯೋಜನೆಯನ್ನು 6 "ಸಿ" ವರ್ಗದ ಜಿಲ್ಲೆಗಳಾದ ಗುಲ್ಬರ್ಗಾ, ಬೀದರ್, ರಾಯಚೂರು, ಕೊಪ್ಪಳ, ಬಿಜಾಪುರ ಮತ್ತು ಬಾಗಲಕೋಟೆ ಹಾಗೂ ಹಿಂದುಳಿದ ಜಿಲ್ಲೆಯಾದ ಚಾಮರಾಜನಗರದಲ್ಲಿ 2007–08ನೇ ಸಾಲಿನಲ್ಲಿ ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗರ್ಭಿಣಿ ಮಹಿಳೆಯರಿಗೆ ಅನ್ವಯಿಸಿ ಪ್ರಾರಂಭಿಸಲಾಗಿರುತ್ತದೆ. ಪ್ರಸ್ತುತ ವರ್ಷದಿಂದ ಪ್ರಸೂತಿ ಆರೈಕೆಯನ್ನು ತಾಯಿ ಭಾಗ್ಯ ಯೋಜನೆ ಒಂದು ಅಂಗವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಾಸ ಮಾಡುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಗರ್ಭಿಣಿ ಮಹಿಳೆಯರಿಗೆ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರೂ ಸೇರಿದಂತೆ) ಅನ್ವಯಿಸಿ ವಿಸ್ತರಿಸಲಾಗಿದೆ.

ಈ ಯೋಜನೆಯಡಿಯಲ್ಲಿ ನೀಡಬೇಕಿರುವ ಸೌಲಭ್ಯಗಳು ಮತ್ತು ಅನ್ವಯಿಸುವ ಷರತ್ತುಗಳು ಈ ಕೆಳಕಂಡಂತಿವೆ:

1) ಆಯಾಯ ಕ್ಷೇತ್ರದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಲ್ಲಿ ನೊಂದಾಯಿಸಿಕೊಂಡಿರುವ ಗರ್ಭಿಣಿ ಸ್ತ್ರೀಯರಿಗೆ ಎರಡು ಮತ್ತು ಮೂರನೇ ತ್ರೈಮಾಸಿಕ ಗರ್ಭಿಣಿ ಪರೀಕ್ಷೆ ಸಮಯದಲ್ಲಿ ಒಟ್ಟು ರೂ.2000/– (ಎರಡು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಅಂದರೆ ರೂ. 1000/–ನ್ನು ಎರಡನೇ ತ್ರೈಮಾಸಿಕ ಗರ್ಭಿಣಿ ಪರೀಕ್ಷಾ ಸಮಯದಲ್ಲಿ (ಅಂದರೆ 4 ರಿಂದ 6ನೇ ತಿಂಗಳಲ್ಲಿ) ಹಾಗೂ ಮತ್ತೆ ರೂ.1000/– ನ್ನು ಮೂರನೇ ತ್ರೈಮಾಸಿಕ ಗರ್ಭಿಣಿ ಪರೀಕ್ಷಾ ವೇಳೆಯಲ್ಲಿ (ಅಂದರೆ 7 ರಿಂದ 9ನೇ ತಿಂಗಳಲ್ಲಿ) ಚೆಕ್ ಮೂಲಕ ನೀಡತಕ್ಕದ್ದು.

2) ಪ್ರತಿ ಎ.ಎನ್.ಸಿ. ಭೇಟಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ/ ಸರ್ಕಾರಿ ಆಸ್ಪತರೆ ವೈದ್ಯಾಧಿಕಾರಿಗಳು ಜನನಿ ಸುರಕ್ಷಾ ಯೋಜನೆ ಕಾರ್ಡಿನಡಿಯಲ್ಲಿ ದಿನಾಂಕ, ಸಹಿ ಮತ್ತು ಮೊಹರನ್ನು ನಮೂದಿಸಬೇಕು.

3) ಪ್ರತಿಯೊಬ್ಬ ಗರ್ಭಿಣಿ ಸ್ತ್ರೀಯು ಬ್ಯಾಂಕ್ ಖಾತೆಯನ್ನು ತೆರೆದಿರಬೇಕು.
4) ಗರ್ಭಿಣಿ ಸ್ತ್ರೀಯರಿಗೆ ಪೌಷ್ಟಿಕಾಂಶದ ಅವಶ್ಯಕತೆಯ ಬಗ್ಗೆ ಇರುವ ಒಂದು ಮಾಹಿತಿ ಪುಸ್ತಕವನ್ನು ಐ.ಇ.ಸಿ. ವಿಭಾಗದಿಂದ ನೀಡಬೇಕು.
5) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿ ಸ್ತ್ರೀಯರಿಗೆ ಈ ಸೌಲಭ್ಯ ನೀಡತಕ್ಕದ್ದು.
6) ಆಯಾಯ ಕ್ಷೇತ್ರದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಲ್ಲಿ ಗರ್ಭಿಣಿಯರು ನೊಂದಾಯಿಸಿಕೊಂಡಿರಬೇಕು.

7) ಇದು ಮೊದಲನೇ ಎರಡು ಹೆರಿಗೆಗಳಿಗೆ ಸೀಮಿತವಾಗಿರುತ್ತದೆ. ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಫಲಾನುಭವಿಗಳ ಗರ್ಭಿಣಿ ದಾಖಲಾತಿ (ಎಎನ್‌ಸಿ) ಸಂಖ್ಯೆ ಹಾಗೂ ಒಂದನೇ ಅಥವಾ ಎರಡನೇ ಹೆರಿಗೆಯ ಖಚಿತತೆಗಾಗಿ ದಾಖಲೆ ಮಾಡಿ ಸಹಿ ಮಾಡಬೇಕು.

**ಮಡಿಲು:**

ತಾಯಿ–ಮಗುವಿನ ಆರೋಗ್ಯಕರ ಬಾಣಂತನ ದೊರಕಿಸಿ ಕೊಡಲು ಕರ್ನಾಟಕ ಸರ್ಕಾರವು ಮಡಿಲು ಎಂಬ ಅಪೂರ್ವ ಯೋಜನೆಯನ್ನು ದಿನಾಂಕ 15–9–2007ರಂದು ಅನುಷ್ಠಾನಗೊಳಿಸಿದೆ ಹಾಗೂ ಈ ಕಾರ್ಯಕ್ರಮವನ್ನು ದಿನಾಂಕ 1–10–2007ರಂದು ಉದ್ಘಾಟನೆಯಾಗಿ, ರಾಜ್ಯದ ಎಲ್ಲಾ 29 ಜಿಲ್ಲೆಗಳಲ್ಲಿ ಅನುಷ್ಠಾನಗೊಂಡಿರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಒಟ್ಟು 10 ಲಕ್ಷ ಹೆರಿಗೆಗಳು ಆಗುತ್ತಿದ್ದು, ಆ ಪೈಕಿ ಸುಮಾರು 2.8 ಲಕ್ಷ ತಾಯಂದಿರು ಮಡಿಲು ಯೋಜನೆಯ ಫಲಾನುಭವಿಗಳಾಗಿರುತ್ತಾರೆ. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸುವವರ ಸಂಖ್ಯೆ ಶೇ. 66ರಷ್ಟು ಇದ್ದು, ಇದನ್ನು 2010ರ ವೇಳೆಗೆ ಶೇ 90ರಷ್ಟು ಹೆಚ್ಚಳ ಮಾಡುವ ಗುರಿಯಿದೆ. ಈ ಗುರಿಯನ್ನು ತಲುಪುವಲ್ಲಿ ಮಡಿಲು ಕಾರ್ಯಕ್ರಮವು ಸಹಕಾರಿಯಾಗಿದೆ.

**ಉದ್ದೇಶ:**

ಬಡ ವರ್ಗಕ್ಕೆ ಸೇರಿದ ಗರ್ಭಿಣಿಯರು ಆರೋಗ್ಯ ಕೇಂದ್ರ/ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು. ತಾಯಿ ಮತ್ತು ನವಜಾತ

ಶಿಶುವಿನ ಆರೋಗ್ಯವನ್ನು ಕಾಪಾಡುವುದು. ರಾಜ್ಯದಲ್ಲಿ ತಾಯಂದಿರ ಮತ್ತು ಶಿಶು ಮರಣ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸುವುದು.

**ಮಡಿಲು ಯೋಜನೆಯಡಿಯಲ್ಲಿ ಬರುವ ಫಲಾನುಭವಿಗಳು:**

- ಬಡತನ ರೇಖೆಗಿಂತ ಕೆಳಗಿರುವವರು
- ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಂಡಿರುವವರು
- ಎರಡು ಮಕ್ಕಳಿಗೆ ಸೀಮಿತವಾಗಿರುವವರು

**ಮಡಿಲು ಕಿಟ್‌ನಲ್ಲಿರುವ ಸಾಮಗ್ರಿಗಳು:**

| ಕ್ರಮ ಸಂಖ್ಯೆ | ಸಾಮಗ್ರಿಯ ಹೆಸರು |
|---|---|
| 1 | ಸೊಳ್ಳೆಪರದೆ (ತಾಯಿಗೆ) |
| 2 | ಜಮಖಾನ (ಮೀಡಿಯಂ ಸೈಜ್) |
| 3 | ಬೆಡ್ ಶೀಟ್ (ಮೀಡಿಯಂ) |
| 4 | ತಾಯಿಗೆ ದಪ್ಪಗೆ ಹೊದಿಕೆ (ಮೀಡಿಯಂ) |
| 5 | ತಾಯಿಗೆ ಸೋಪು |
| 6 | ಬಟ್ಟೆ ಒಗೆಯುವ ಸಾಬೂನು |
| 7 | ತಾಯಿಗೆ ಹೊಟ್ಟೆಗೆ ಕಟ್ಟುವ ಬಟ್ಟೆ |
| 8 | ಸ್ಯಾನಿಟರಿ ಪ್ಯಾಡ್ಸ್ (ಚೌಕ ಕಾಟನ್ ಬಟ್ಟೆ ವಿತ್ ಕುಣಿಕೆ) |
| 9 | ತಾಯಿಗೆ ಬಾಚಣಿಗೆಯೊಂದಿಗೆ ಕೊಬ್ಬರಿ ಎಣ್ಣೆ |
| 10 | ತಾಯಿಗೆ ಟವಲ್ |
| 11 | ಟೂತ್ ಪೇಸ್ಟ್ ವಿತ್ ಬ್ರಷ್ |
| 12 | ಮಗುವಿಗೆ ರಬ್ಬರ್ ಶೀಟ್ ಮೇಲ್ ಬೆಡ್ ಶೀಟ್ |
| 13 | ಮಗುವಿಕೆ ಹೊದಿಕೆ |
| 14 | ಮಗುವಿನ ಮೈ ಸಾಬೂನು |
| 15 | ಮಗುವಿಗೆ ರಬ್ಬರ್ ಶೀಟ್ |
| 16 | ಮಗುವಿಗೆ ಡೆಯಪರ್ |
| 17 | ಮಗುವಿಗೆ ಜುಬ್ಲ |
| 18 | ಮಗುವಿಗೆ ಸ್ವಟರ್ + ಕುಲಾವಿ + ಕಾಲುಚೀಲ |
| 19 | ಒಂದು ಪ್ಲಾಸ್ಟಿಕ್ ಬ್ಯಾಗ್ (ಕಿಟ್) |

ಮಡಿಲು ಕಿಟ್‌ನಲ್ಲಿರುವ ಸಾಮಾನುಗಳನ್ನು ಕರ್ನಾಟಕ ರಾಜ್ಯದ ಅಂಗ ಸಂಸ್ಥೆಗಳಾದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಇವರುಗಳಿಗೆ ಸರಬರಾಜು ಮಾಡಲು ಆದೇಶವನ್ನು ನೀಡಲಾಗಿರುತ್ತದೆ. ಸೊಳ್ಳೆಪರದೆಯನ್ನು ಡಿ.ಜಿ.ಎಸ್. ಮತ್ತು ಡಿ ದರ ಗುತ್ತಿಗೆ ಆಧಾರದ ಮೇಲೆ ಖರೀದಿಸಿ, ಇವುಗಳನ್ನು ಮಳೇರಿಯಾಗ್ರಸ್ತ ಜಿಲ್ಲೆಗಳಿಗೆ ಮಾತ್ರ ಸರಬರಾಜು ಮಾಡಲಾಗಿದೆ.

ಒಂದು ಕಿಟ್ ಬೆಲೆ

| | | |
|---|---|---|
| ಕೆ.ಹೆಚ್.ಡಿ.ಸಿ. | – | 975.00 |
| ಕೆ.ಎಸ್‌ಡಿ.ಎಲ್ | – | 140.00 |
| ಸೊಳ್ಳೆಪರದೆ | – | 219.00 |
| ಒಟ್ಟು | | 1334.00 |

2008–09ನೇ ಸಾಲಿಗೆ ಈ ಕಾರ್ಯಕ್ರಮವು ಮುಂದುವರೆದ ಯೋಜನೆಯಾಗಿದೆ. ರಾಜ್ಯ ಸರ್ಕಾರದಿಂದ ರೂ. 4.00 ಕೋಟಿ ಹಾಗೂ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ ಯೋಜನೆಯಡಿಯಲ್ಲಿ ರೂ.10.00 ಕೋಟಿಗಳ ಅನುದಾನವನ್ನು ಮಡಿಲು ಯೋಜನೆಗೆ ಒದಗಿಸಲಾಗಿದೆ.

**ತಾಯಿ ಭಾಗ್ಯ:**

**ಹಿನ್ನೆಲೆ:**

1) ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ತಜ್ಞ ವೈದ್ಯರುಗಳ ಕೊರತೆ, ಅದರಲ್ಲೂ ವಿಶೇಷವಾಗಿ ಪ್ರಸೂತಿ ತಜ್ಞರು, ಅರವಳಿಕೆ ತಜ್ಞರು ಹಾಗೂ ಮಕ್ಕಳ ತಜ್ಞರ ಕೊರತೆ ಇರುವುದು ಕಂಡು ಬಂದಿರುತ್ತದೆ.

2) ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಮೇಲ್ಕಂಡ ತಜ್ಞ ವೈದ್ಯರ ಹುದ್ದೆಗಳು ಬಹುತೇಕ ಖಾಲಿ ಇರುತ್ತವೆ.

3) ಹೀಗಾಗಿ ತಜ್ಞ ವೈದ್ಯರುಗಳ ಕೊರತೆಯಿಂದಾಗಿ ತಾಯಿ ಮತ್ತು ಮಕ್ಕಳ ಸೇವೆ ಸಮರ್ಪಕವಾಗಿ ನೀಡಲು ಸಾಧ್ಯವಾಗಿರುವುದಿಲ್ಲ.

4) ಸರ್ಕಾರಿ ಆರೋಗ್ಯ ಸಂಸ್ಥೆಗಳು ಕರ್ನಾಟಕ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತವೆ. ಆದರೆ ಈ ಸಂಸ್ಥೆಗಳಲ್ಲಿ ವೈದ್ಯಕೀಯ ಸೌಲಭ್ಯಗಳು ಹಾಗೂ ತಜ್ಞ ವೈದ್ಯರ ಸೌಲಭ್ಯಗಳು ಸಾರ್ವಜನಿಕರಿಗೆ ದೊರೆಯದೇ ಇರುವುದು ಕಂಡು ಬಂದಿರುತ್ತದೆ.

5) ಕರ್ನಾಟಕ ರಾಜ್ಯದ ಪಟ್ಟಣ ಪ್ರದೇಶಗಳಲ್ಲಿ ಖಾಸಗೀ ಆಸ್ಪತ್ರೆಗಳಲ್ಲಿ ಹೆಚ್ಚಿನ ತಜ್ಞ ವೈದ್ಯರು ಇರುವುದು ಕಂಡು ಬಂದಿರುತ್ತದೆ.

6) ಈ ಎಲ್ಲಾ ಮೇಲ್ಕಂಡ ಅಂಶಗಳಿಂದ ಸಾರ್ವಜನಿಕರಿಗೆ ಅದರಲ್ಲೂ ಗ್ರಾಮೀಣ ಪ್ರದೇಶದ ಜನತೆಗೆ ತಜ್ಞ ಪ್ರಸೂತಿ ಸೇವೆಗಳ ಸೌಲಭ್ಯ ಒದಗಿಸಲು ಸಾರ್ವಜನಿಕ–ಖಾಸಗಿ ಸಹಭಾಗಿತ್ವ ಒಂದು ಮಾರ್ಗವಾಗಿದೆ.

ಈ ದಿಸೆಯಲ್ಲಿ ಗುಜರಾಜ್ ರಾಜ್ಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ "ಚಿರಂಜೀವಿ ಯೋಜನೆ"ಯ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ಮೇಲೆ ಹೇಳಿದ ತಜ್ಞರ ಸೇವೆ ಲಭ್ಯವಿರುವ ಖಾಸಗಿ ಆಸ್ಪತ್ರೆಗಳನ್ನು ಸಾರ್ವಜನಿಕ–ಖಾಸಗಿ ಸಹಯೋಗದಲ್ಲಿ ತಾಯಿ ಭಾಗ್ಯ ಯೋಜನೆಯಲ್ಲಿ ತೊಡಗಿಸಿಕೊಂಡು ಈ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಮಹಿಳೆಯರಿಗೆ ಸಂಪೂರ್ಣ ನಗದುರಹಿತ (totally cashless treatment) ಚಿಕಿತ್ಸೆಯನ್ನು ಖಾಸಗಿ ಆಸ್ಪತ್ರೆಗಳಲ್ಲಿ ದೊರಕಿಸುವಂತೆ ರೂಪಿಸಲಾಗಿದೆ.

**ಉದ್ದೇಶ:**

ನುರಿತ ಹೆರಿಗೆ ತಜ್ಞರಿಂದ ಸಾಂಸ್ಥಿಕ ಹೆರಿಗೆಗಳನ್ನು ಹೆಚ್ಚಿಸುವುದು ಈ ಯೋಜನೆಯ ಉದ್ದೇಶ. ಯೋಜನೆಯ ಅನುಷ್ಠಾನದಿಂದ ತಾಯಿ ಮರಣ ಹಾಗೂ ಶಿಶು ಮರಣ ದರವನ್ನು ಆದಷ್ಟೂ ಕಡಿಮೆ ಮಾಡುವುದು.

**ಅನುಷ್ಠಾನ:**

ಕರ್ನಾಟಕ ರಾಜ್ಯದ ಆರು 'ಸಿ' ವರ್ಗದ ಜಿಲ್ಲೆಗಳಾದ ಗುಲ್ಬರ್ಗಾ, ಬೀದರ್, ರಾಯಚೂರು, ಕೊಪ್ಪಳ, ಬಿಜಾಪುರ ಮತ್ತು ಬಾಗಲಕೋಟೆ ಹಾಗೂ ಹಿಂದುಳಿದ ಜಿಲ್ಲೆಯಾದ ಚಾಮರಾಜನಗರ ಜಿಲ್ಲೆಯಲ್ಲಿ ಇರುವ ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿ ಮಹಿಳೆಯರು ಹೆರಿಗೆಗಾಗಿ ಯಾವುದೇ ನೊಂದಾಯಿತ ಖಾಸಗಿ ಆರೋಗ್ಯ ಸಂಸ್ಥೆಗಳಲ್ಲಿ ಸೇವೆಯನ್ನು ಉಚಿತವಾಗಿ ಪಡೆಯಬಹುದು.

**ಅರ್ಹತೆ:**

ಈ ಕೆಳಕಂಡವರು ಯೋಜನೆಯ ಸವಲತ್ತುಗಳಿಗೆ ಅರ್ಹರಾಗಿರುತ್ತಾರೆ.

1) 6 'ಸಿ' ವರ್ಗದ ಜಿಲ್ಲೆಗಳು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ವಾಸಿಸುತ್ತಿರಬೇಕು.
2) ಬಡತನ ರೇಖೆಗಿಂತ ಕೆಳಗಿನ ಕುಟುಂಬದ ಮಹಿಳೆಯಾಗಿರಬೇಕು
3) ಮೊದಲನೇ ಎರಡು ಜೀವಂತ ಹೆರಿಗೆಗಳಿಗೆ ಈ ಸೌಲಭ್ಯವು ಸೀಮಿತವಾಗಿರುತ್ತದೆ.

ವಿಧಾನ:

ಪ್ರಥಮತಃ ಈ ಯೋಜನೆಯಲ್ಲಿ ಸೇರಬಯಸಲು ಇಚ್ಛಿಸುವ ಖಾಸಗಿ ಆಸ್ಪತ್ರೆಗಳಿಂದ EOI (Expresion of Interest) ಕರೆಯಲಾಗುವುದು. ಸದರಿ EOIನಲ್ಲಿ ಈ ಯೋಜನೆಯಡಿ ಖಾಸಗಿ ಆಸ್ಪತ್ರೆಯು ಫಲಾನುಭವಿಗೆ ನೀಡಬೇಕಾದ ಚಿಕಿತ್ಸೆಗಳು ಹಾಗೂ ಅದರ ದರ ಇತ್ಯಾದಿಯನ್ನು ಒಳಗೊಂಡ ವಿವರಗಳನ್ನು ತಿಳಿಸತಕ್ಕದ್ದು. ಆಸಕ್ತಿ ತೋರಿಸಿದ ಆಸ್ಪತ್ರೆಗಳನ್ನು ಸಂಬಂಧಿಸಿದ ಜಿಲ್ಲೆಗಳಲ್ಲಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಹಾಗೂ ಜಿಲ್ಲಾ ಶಸ್ತ್ರ ಚಿಕಿತ್ಸಕರು ತಪಾಸಣೆ ಮಾಡಿ ಕನಿಷ್ಠ ಅರ್ಹತೆಗಳನ್ನು ಹೊಂದಿರುವ ಆಸ್ಪತ್ರೆಗಳನ್ನು ಜಿಲ್ಲಾ ಆರೋಗ್ಯ ಸೊಸೈಟಿಯ ಅನುಮೋದನೆ ಪಡೆದು ನೊಂದಾಯಿಸುವುದು. ಸರ್ಕಾರಿ ಆಸ್ಪತ್ರೆಗಳು ಕೂಡ ಈ ಯೋಜನೆಯಡಿಯಲ್ಲಿ ಭಾಗವಹಿಸಬಹುದು.

ಈ ನೋಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ಅವರು ನೀಡುವ ಸೇವೆಗಳಿಗೆ ಪ್ರತಿಯಾಗಿ ಪ್ರತಿ 100 ಹೆರಿಗೆಗಳಿಗೆ ರೂ. 3.00 ಲಕ್ಷಗಳನ್ನು (ಮೂರು ಲಕ್ಷ ರೂಪಾಯಿಗಳು ಮಾತ್ರ) ನೀಡಲಾಗುವುದು. ಈ ಸೇವೆಗಳಲ್ಲಿ ಸಾಮಾನ್ಯ ಹೆರಿಗೆ, ಕಷ್ಟಕರ ಹೆರಿಗೆ, ಸಿಸೇರಿಯನ್, ಹೆರಿಗೆಗಳು ಇತ್ಯಾದಿ ಎಲ್ಲವೂ ಸೇರುತ್ತದೆ. ಸರ್ಕಾರಿ ವೃತ್ತಗಳಲ್ಲಿ ಹಣಪಾವತಿಯು ಸಾಕಷ್ಟು ಸಮಯ ತೆಗೆದು ಕೊಳ್ಳುವುದರಿಂದ ಸದರಿ ಖಾಸಗಿ ಆಸ್ಪತ್ರೆಗಳಿಗೆ ನಿಗದಿತ ಮೊತ್ತವಾದ ರೂ. 3 ಲಕ್ಷಗಳ ಶೇಕಡ 10ರಷ್ಟು ಅಂದರೆ ರೂ. 30,000/– (ಮೂವತ್ತು ಸಾವಿರ ರೂಪಾಯಿಗಳು ಮಾತ್ರ)ಗಳ ಹಣವನ್ನು ಮುಂಗಡವಾಗಿಯೇ ಪಾವತಿ ಮಾಡಲಾಗುವುದು. ಇದರಿಂದಾಗಿ ಹೆಚ್ಚು ಖಾಸಗಿ ಆಸ್ಪತ್ರೆಗಳು ಆಸಕ್ತಿ ತೋರಿಸಲು ಅವಕಾಶವಾಗುವುದು.

ಈ ಯೋಜನೆಯಡಿ ಭಾಗವಹಿಸುವ ಪ್ರತಿ ಸರ್ಕಾರಿ ಆಸ್ಪತ್ರೆಯ ಸೇವೆಗಳಿಗೆ ಪ್ರತಿಯಾಗಿ ಪ್ರತಿ 100 ಹೆರಿಗೆಗಳಿಗೆ ರೂ. 1.5 ಲಕ್ಷಗಳನ್ನು (ರೂಪಾಯಿಗಳು ಒಂದು ಲಕ್ಷದ ಐವತ್ತು ಸಾವಿರಗಳು ಮಾತ್ರ) ನೀಡಲಾಗುವುದು. ಇದರಲ್ಲಿ ಶೇಕಡ 50 (ಐವತ್ತು) ಭಾಗವನ್ನು ಆರೋಗ್ಯ ರಕ್ಷಾ ಸಮಿತಿಗೂ ಉಳಿದ ಶೇಕಡ 50 ಭಾಗವನ್ನು ಆಸ್ಪತ್ರೆಯ ವೈದ್ಯರು, ಶುಶ್ರೂಷಕರು ಮತ್ತು ಸಿಬ್ಬಂದಿಯವರಿಗೆ ಯಶಸ್ವಿನಿ ಮಾರ್ಗಸೂಚಿಗಳ ಅನುಸಾರ ಹಂಚಲಾಗುವುದು.

ಈ ವಿಧಾನದಲ್ಲಿ ಗರ್ಭಿಣಿ ಮಹಿಳೆಯು ತನ್ನ ಮನೆಗೆ ಹತ್ತಿರವಿರುವ ನೊಂದಾಯಿತ ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆ ಸೇವೆಗಳನ್ನು ಪಡೆಯಬಹುದು.

ಮಹಿಳೆಯು ಆಸ್ಪತ್ರೆಗೆ ಪ್ರವೇಶಿಸಿದಾಗಿನಿಂದ ಬಿಡುಗೆಯಾಗುವವರೆಗೆ ಯಾವುದೇ ಶುಲ್ಕವನ್ನು ನೀಡಬೇಕಾಗಿರುವುದಿಲ್ಲ. ಚಿಕಿತ್ಸೆಯು ಸಂಪೂರ್ಣವಾಗಿ ಉಚಿತವಾಗಿರುತ್ತದೆ.

ಈ ಬಗ್ಗೆ ಇಲಾಖೆಯ ನೊಂದಾಯಿತ ಆಸ್ಪತ್ರೆಗಳೊಂದಿಗೆ ಒಂದು ಒಡಂಬಡಿಕೆ (MoU) / Agreementಯನ್ನು ಮಾಡಿಕೊಳ್ಳುವುದು.

ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿಯಲ್ಲಿ ನೊಂದಣಿಯಾಗಲು ಷರತ್ತುಗಳು:

1) ಖಾಸಗಿ ಆರೋಗ್ಯ ಸಂಸ್ಥೆಯು ಕನಿಷ್ಟ 10 ಒಳರೋಗಿಗಳ ಹಾಸಿಗೆಯನ್ನು ಪಡೆದಿರಬೇಕು.
2) ಶಸ್ತ್ರ ಚಿಕಿತ್ಸಾ ಕೊಠಡಿ ಹಾಗೂ ಹೆರಿಗೆ ಕೊಠಡಿಗಳು ಸುಸ್ಥಿತಿಯಲ್ಲಿದ್ದು, ಸೇವೆ ಲಭ್ಯವಿರಬೇಕು.
3) ದಿನದ 24 ಗಂಟೆಗಳ ಕಾಲ ಪ್ರಸೂತಿ ತಜ್ಞರು, ಅರವಳಿಕೆ ತಜ್ಞರು ಹಾಗೂ ಮಕ್ಕಳ ತಜ್ಞರ ಸೇವೆ ಲಭ್ಯವಿರಬೇಕು.
4) ರಕ್ತ ನಿಧಿ ಸೌಲಭ್ಯ ಇರುವ ಸಂಸ್ಥೆಯೊಂದಿಗೆ ಸಂಪರ್ಕ ಇರಬೇಕು.

**ಫಲಾನುಭವಿಗಳನ್ನು ಗುರುತು ಹಚ್ಚುವುದು:**

ಫಲಾನುಭವಿಗಳಿಗೆ ನೀಡಿರುವ ಸಾಯಿ ಕಾರ್ಡಿನ ಮೂಲಕ ಅರ್ಹತೆಯುಳ್ಳ ಫಲಾನುಭವಿಗಳನ್ನು ಪತ್ತೆ ಹಚ್ಚಲಾಗುವುದು.

**ಪಾವತಿ ವಿಧಾನ:**

ರೂ. 30,000/– (ಮೂವತ್ತು ಸಾವಿರ ರೂಪಾಯಿಗಳು ಮಾತ್ರ) ಮುಂಗಡ ಹಣ ಪಾವತಿಯ ನಂತರ ಪ್ರತಿ ನೊಂದಾಯಿತ ಖಾಸಗಿ ಆಸ್ಪತ್ರೆಯು 3 ತಿಂಗಳಿಗೊಮ್ಮೆ ತನ್ನಲ್ಲಿ ನೀಡಿರುವ ಸೇವೆಗಳಿಗೆ ಅನುಗುಣವಾಗಿ ಬಿಲ್ಲುಗಳನ್ನು ತಯಾರಿಸಿ ಸಂಬಂಧಿಸಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗೆ ಸಲ್ಲಿಸುವುದು. ಜಿಲ್ಲಾ ಆರೋಗ್ಯ ಅಧಿಕಾರಿಗಳು ಬಿಲ್ಲುಗಳನ್ನು ಪರಿಶೀಲಿಸಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಇವರ ಅನುಮೋದನೆ ಪಡೆದು ಬಿಲ್ಲುಗಳನ್ನು ಪಾವತಿ ಮಾಡುವುದು. ಈ ಬಗ್ಗೆ ಖಾಸಗಿ ಆಸ್ಪತ್ರೆಗಳು ಬಳಕೆ ಪ್ರಮಾಣ ಪತ್ರವನ್ನು ಪ್ರತಿ 3 ತಿಂಗಳಿಗೊಮ್ಮೆ ಸಲ್ಲಿಸುವುದು.

**ಮೇಲ್ವಿಚಾರಣೆ ಮತ್ತು ವಿಶ್ಲೇಷಣೆ:**

ಈ ಯೋಜನೆಯ ಮೇಲ್ವಿಚಾರಣೆ, ಉಸ್ತುವಾರಿ ಮತ್ತು ಮೌಲ್ಯಮಾಪನವನ್ನು ಎರಡು ಹಂತಗಳ ಕೆಳಕಂಡ ಸಮಿತಿಗಳ ಮೂಲಕ ಮಾಡತಕ್ಕದ್ದು.

(1) ರಾಜ್ಯ ಮಟ್ಟದ ಸಮಿತಿ:–

1. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು – ಅಧ್ಯಕ್ಷರು
2. ಅಭಿಯಾನ ನಿರ್ದೇಶಕರು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ – ಸಹ ಅಧ್ಯಕ್ಷರು
3. ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್) – ಸದಸ್ಯ ಕಾರ್ಯದರ್ಶಿ
4. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು – ಸದಸ್ಯರು
5. ಜಂಟಿ ನಿರ್ದೇಶಕರು (ಎಂ.ಸಿ.ಹೆಚ್) – ಸದಸ್ಯರು
6. ಡಾ: ಶ್ರೀನಿವಾಸ, ಸಮಾಲೋಚಕರು (Programme Management Implementation and Mainstreaming) ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ – ಸದಸ್ಯರು
7. ಸಮಿತಿ ಅಧ್ಯಕ್ಷರು ನಾಮ ನಿರ್ದೇಶಿಸುವ ಇಬ್ಬರು ತಜ್ಞ ವೈದ್ಯರು (ಒಬ್ಬ ಗೈನಾಕಾಲಜಿಸ್ಟ್ ಮತ್ತು ಒಬ್ಬ ಮಕ್ಕಳ ತಜ್ಞರು) – ಸದಸ್ಯರು

**ರಾಜ್ಯ ಮಟ್ಟದ ಸಮಿತಿಯು ನಿರ್ವಹಿಸಬೇಕಾದ ಕಾರ್ಯನಿರ್ವಹಣೆ:**

1) EoI ಮತ್ತು MoU/Agreementಗಳನ್ನು ತಯಾರಿಸುವ ಕುರಿತು ಸೇರಿದಂತೆ ಜಿಲ್ಲಾ ಸಮಿತಿಯು ತನ್ನ ಕಾರ್ಯನಿರ್ವಹಣೆಗೆ ಬೇಕಾದ ಮಾರ್ಗಸೂಚಿಗಳನ್ನು ನೀಡುವುದು (ಕರಡು EOI ಮತ್ತು MOU/ Agreementಗಳ ಪ್ರತಿಗಳನ್ನು ಜಿಲ್ಲಾ ಮಟ್ಟದ ಸಮಿತಿಗೆ ಒದಗಿಸುವುದು)

2) ಜಿಲ್ಲಾ ಸಮಿತಿಯು ಆಯ್ಕೆ ಮಾಡುವ ಖಾಸಗಿ ಆಸ್ಪತ್ರೆಗಳ ಪೈಕಿ Randum ಆಗಿ ಶೇಕಡ 5ರಷ್ಟು ಆಸ್ಪತ್ರೆಗಳನ್ನು ತಪಾಸಣೆ ಮಾಡುವುದು.

3) ಈ ಕಾರ್ಯಕ್ರಮದ ಪ್ರಗತಿ / ವೆಚ್ಚ ಇತ್ಯಾದಿಯನ್ನು ಪ್ರತಿ ತಿಂಗಳು ಪರಿಶೀಲನೆ ಮಾಡುವುದು.

4) ಒಟ್ಟಾರೆ ಈ ಕಾರ್ಯಕ್ರಮವನ್ನು ರಾಜ್ಯದಲ್ಲಿ ಯಾವ ರೀತಿ ಪರಿಣಾಮ–ಬೀರುತ್ತಿದೆ ಎಂಬುದನ್ನು ವಿಶ್ಲೇಷಿಸಿ ಸರ್ಕಾರಕ್ಕೆ ವರದಿ ಮಾಡುವುದು.

**2. ಜಿಲ್ಲಾ ಮಟ್ಟದ ಸಮಿತಿ:**

1) ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ, ಜಿಲ್ಲಾ ಪಂಚಾಯತ್ – ಅಧ್ಯಕ್ಷರು
2) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ – ಸದಸ್ಯ ಕಾರ್ಯದರ್ಶಿ
3) ಜಿಲ್ಲಾ ಶಸ್ತ್ರ ಚಿಕಿತ್ಸಕರು – ಸದಸ್ಯರು
4) ಆರ್.ಸಿ.ಹೆಚ್. ಅಧಿಕಾರಿ – ಸದಸ್ಯರು
5) ಜಿಲ್ಲಾ ಕಾರ್ಯಕ್ರಮಾಧಿಕಾರಿಗಳು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ – ಸದಸ್ಯರು
6) ಸಮಿತಿ ಅಧ್ಯಕ್ಷರು ನಾಮ ನಿರ್ದೇಶಿಸುವ ಇಬ್ಬರು ತಜ್ಞ ವೈದ್ಯರು (ಒಬ್ಬ ಗೈನಾಕಾಲಜಿಸ್ಟ್ ಮತ್ತು ಒಬ್ಬ ಮಕ್ಕಳ ತಜ್ಞರು) – ಸದಸ್ಯರು

**ಜಿಲ್ಲಾ ಮಟ್ಟದ ಸಮಿತಿಯು ನಿರ್ವಹಿಸಬೇಕಾದ ಕಾರ್ಯನಿರ್ವಹಣೆ:**

1. ಜಿಲ್ಲಾ ಮಟ್ಟದಲ್ಲಿ Expression of Interest (EOI) ಕರೆಯಲು ಕ್ರಮ ವಹಿಸುವುದು.

2. ಈ ಯೋಜನೆಯಡಿ ಆಯ್ಕೆ ಮಾಡಲು ಅರ್ಹವಿರುವ ಪ್ರತಿ ಖಾಸಗಿ ಆಸ್ಪತ್ರೆಯನ್ನು ತಪಾಸಣೆ ಮಾಡಿ ನಿಗದಿಪಡಿಸಿದ ಸೌಲಭ್ಯಗಳು ಇರುವ ಬಗ್ಗೆ ಖಾತರಿ ಪಡಿಸಿಕೊಂಡು ದಾಖಲೆ ಮಾಡುವುದು.

3. ಖಾಸಗಿ ಆಸ್ಪತ್ರೆಯ ಆಯ್ಕೆಯನ್ನು ಪಾರದರ್ಶಕತೆ ಅನುಸರಿಸಿ ಆಯ್ಕೆ ಮಾಡುವುದು.

4. ಆಯ್ಕೆಗೊಂಡ ಖಾಸಗಿ ಆಸ್ಪತ್ರೆಗಳೊಂದಿಗೆ MOV/Agreement ಅನ್ನು ಸಹಿ ಮಾಡುವುದು.

5. ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮದ ಮೇಲ್ವಿಚಾರಣೆ/ಪರಿಶೀಲನೆಯನ್ನು ಪ್ರತಿ ತಿಂಗಳು ಮಾಡಿ ವೆಚ್ಚ ಪಟ್ಟಿಯನ್ನು ಜಿಲ್ಲಾ ಉಸ್ತುವಾರಿ ಸಮಿತಿಗೆ ಒದಗಿಸತಕ್ಕದ್ದು.

6. ಈ ಕಾರ್ಯಕ್ರಮದ ಅಡಿಯಲ್ಲಿ ಫಲಾನುಭವಿಗಳಿಂದ ಯಾವುದೇ ಕುಂದು ಕೊರತೆ ಬಂದಲ್ಲಿ ಅವುಗಳಿಗೆ ಸ್ಪಂಧಿಸಿ ಇತ್ಯರ್ಥಪಡಿಸಲು ಕ್ರಮ ವಹಿಸುವುದು.

**ಮಾಹಿತಿ ಶಿಕ್ಷಣ ಸಂಪರ್ಕ:**

ಈ ಯೋಜನೆಯನ್ನು ಹೊಸದಾಗಿ ಜಾರಿಗೆ ತರುತ್ತಿರುವುದರಿಂದ ಯೋಜನೆಯ ಶೇಕಡ 3ರಷ್ಟು ಹಣವನ್ನು ಸಮುದಾಯಕ್ಕೆ ಮಾಹಿತಿ ನೀಡಲು ಉಪಯೋಗಿಸುವುದು. ಪ್ರತಿ ಜಿಲ್ಲೆಯಲ್ಲಿ ಈ ಬಗ್ಗೆ ಕಾರ್ಯಾಗಾರವನ್ನು ಹಮ್ಮಿಕೊಳ್ಳುವುದು, ಗರ್ಭಿಣಿ ಮಹಿಳೆಯ ಕುಟುಂಬ ವರ್ಗದವರಿಗೆ, ಖಾಸಗಿ ಆಸ್ಪತ್ರೆಗಳಿಗೆ ಮಾಹಿತಿ ಶಿಬಿರಗಳನ್ನು ಏರ್ಪಡಿಸುವುದು ಇತ್ಯಾದಿಗಳನ್ನು ಕೈಗೊಳ್ಳುವುದು.

**(ಕೆ.ಎಸ್. ಸರೋಜಮ್ಮ)**
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

**ವಿಶೇಷ ಘಟಕ ಯೋಜನೆಗೆ ನೀಡಿರುವ ಹಣದ ಬಳಕೆ**

1195 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷದ ಆಯವ್ಯಯ ಅವಧಿಯಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಮಂಜೂರಾದ ಅನುದಾನವೆಷ್ಟು;

ಆ) 2009ರ ಜೂನ್ ಅಂತ್ಯದವರೆಗೆ ಬಿಡುಗಡೆ ಮಾಡಲಾದ / ಖರ್ಚಾದ ಅನುದಾನದ ಮೊತ್ತ ಎಷ್ಟು ; (ವರ್ಷಾವಾರು ವಿವರ ನೀಡುವುದು)

ಇ) ವಿಶೇಷ ಘಟಕ ಯೋಜನೆ ಅಡಿ ಬೀದರ್ ಜಿಲ್ಲೆಯಲ್ಲಿ ಕೈಗೊಂಡ ಕಾರ್ಯಕ್ರಮಗಳಾವುವು ; ವಿವರ ನೀಡುವುದು;

ಈ) ಹಾಗಿದ್ದಲ್ಲಿ, ಶೇಕಡಾವಾರು ಎಷ್ಟು ಗುರಿಯನ್ನು ಹೊಂದಲಾಗಿದ್ದು, ಸಾಧಿಸಿದ ಪ್ರಮಾಣವೇನು;